ESI.A.No. 28−22
RW−1

ಪಾಟೀ ಸವಾಲುಃ− ಅರ್ಜಿದಾರರ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದ

ನಾನು 2021 ರಿಂದ ಎದುರುದಾರರ ಸಂಸ್ಥೆ ಯಲ್ಲಿ ಸೋಶಿಯಲ್ ಸೆಕ್ಯೂರಿಟಿ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಅದಕ್ಕಿಂತ ಮೊದಲು ನಾನು ಎಲ್ ಡಿ ಸಿ / ಯು ಡಿ ಸಿ / ಅಸಿಸೆಟ್ಟ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ . ಅರ್ಜಿದಾರರ ಸಂಸ್ಥೆಯು ಸೊಸೈಟಿ ಆಕ್ಟ್ ರ ಅಡಿಯಲ್ಲಿ ನೊಂದಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರ ಸಂಸ್ಥೆ ಯು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಲಾಗುತ್ತದೆ ಎಂದರೆ ಸರಿಯಲ್ಲ. 2020 ರಲ್ಲಿ ಕೋವಿಡ್ ಇದ್ದುದರಿಂದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ಸರಿಯಾಗಿ ಆಗಿರುವುದಿಲ್ಲ ಹಾಗೂ ಶಿಕ್ಷಣ ಸಂಸ್ಥೆಗಳೂ ಕೂಡ ಸರಿಯಾಗಿ ನಡೆದಿರುವುದಿಲ್ಲ ಎಂದರೆ ಸರಿಯಲ್ಲ . 16.03.2011 ಕ್ಕೆ ಪೂರ್ವದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಇ ಎಸ್ ಐ ಖಾಯ್ದೆ ಅನ್ವಯವಾಗುತ್ತಿರಲಿಲ್ಲ ಎಂದರೆ ಸರಿ . ಎದುರುದಾರರು ಶಿಕ್ಷಣ ಸಂಸ್ಥೆಗಳು ಇ ಎಸ್ ಐ ಖಾಯ್ದೆ ಗೆ ಒಳಪಡುತ್ತಾರೆ ಎಂದು ಶಿಕ್ಷಣ ಸಂಸ್ಥೆ ಗಳಿಗೆ ತಿಳುವಳಿಕೆಯನ್ನು ನೀಡಲಾಗಿರುತ್ತದೆ. ಅರ್ಜಿದಾರರ ಸಂಸ್ಥೆ ಯು Un−aided ಸಂಸ್ಥೆ ಯಾಗಿರುತ್ತದೆ ಎಂದರೆ ಸರಿಯಲ್ಲ .

ಅರ್ಜಿದಾರರ ಸಂಸ್ಥೆ ಗೆ ನಾನು ಖುದ್ದಾಗಿ ವೀಕ್ಷಣೆಗೆಂದು ಹೋಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸಂಸ್ಥೆಯ ಪರವಾಗಿ ಎಸ್ ಎಸ್ ಒ ರವರು ಹೋಗಿರುತ್ತಾರೆ ಎಂದು ನುಡಿಯುತ್ತಾರೆ . ಆದುದರಿಂದ ಅರ್ಜಿದಾರರ ಸಂಸ್ಥೆಯಲ್ಲಿ ಎಷ್ಟು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ನನಗೆ ಖುದ್ದಾಗಿ ಗೊತ್ತಿರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ದಾಖಲೆಗಳನ್ನು ನೋಡಿ ಸದರಿ ವಿಚಾರದ ಬಗ್ಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ . ಅರ್ಜಿದಾರರು " ಕುಸುಮ" ಸಂಸ್ಥೆಯ ಸದಸ್ಯಯಾಗಿರುತ್ತಾರೆ ಎಂದರೆ ಸರಿ . ಶಿಕ್ಷಣ ಸಂಸ್ಥೆ ಯನ್ನು ಇ ಎಸ್ ಐ ಕಾಯಿದೆ ಅಡಿಯಲ್ಲಿ ತಂದಾಗ " ಕುಸುಮ" ಸಂಸ್ಥೆಯು ಸದರಿ ವಿಚಾರವನ್ನು ವಿರೋಧಿಸಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾ ರೆ ಎಂದರೆ ಸರಿ . ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಅರ್ಜಿಯಲ್ಲಿ ಯಾವುದೇ ತಡೆಯಾಜ್ಞೆಯನ್ನು ನೀಡದೇ ಇದ್ದುದರಿಂದ ಎದುರುದಾರರು ಅರ್ಜಿದಾರರ ಸಂಸ್ಥೆ ಗೆ ಭೇಟಿ ನೀಡಿ ಸಂಸ್ಥೆ ಯನ್ನು ಕಾಯಿದೆ ಅಡಿಯಲ್ಲಿ ತಂದಿರುತ್ತಾರೆ ಎಂದರೆ ಸರಿಯಲ್ಲ . ಅರ್ಜಿದಾರರು ಎದುರುದಾರರ ವಿರುದ್ಧ 3 ಪ್ರಕರಣ ಈ ನ್ಯಾಯಾಧೀಕರಣದ ಮುಂದೆ ದಾಖಲಿಸಿರುತ್ತಾರೆ ಎಂದರೆ ಸರಿ .

ಈ ಪ್ರಕರಣ ವಲ್ಲದೆ ಇ ಎಸ್ ಐ ಎ 29-2023, ಮತ್ತು 72-2018 ಅರ್ಜಿಗಳನ್ನು ದಾಖಲಿಸಲಾಗಿರುತ್ತದ ಎಂದರೆ ಸರಿ . ಸದರಿ ಮೂರು ಪ್ರಕರಣ ಗಳಲ್ಲಿ ಎದುರುದಾರರು ಅಡಾಕ್ ಬೇಸಿಸ್ ಮೇಲೆ ವಂತಿಗೆಯನ್ನು ಲೆಕ್ಕ ಮಾಡಿದ್ದನ್ನು ಅರ್ಜಿದಾರರು ಪ್ರಶ್ನಿಸಿರುತ್ತಾರೆ ಎಂದರೆ ಸರಿ . ಇದಾದ ನಂತರ ಅರ್ಜಿದಾರರು WP No.15368/2022 ನ್ನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ . ಸದರಿ ಅರ್ಜಿಯಲ್ಲಿ ಎದುರುದಾರರು ಕೇಳಿದ ವಂತಿಗೆಯು ಅರ್ಜಿದಾರರ ಕಟ್ಟಬೇಕಾದ ವಂತಿಗೆಗಿಂತ ಹೆಚ್ಚಾಗಿರುತ್ತದೆ ಎಂದು ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಅರ್ಜಿದಾರರ ಪರವಾಗಿ ಅವರ ವಕೀಲರು ವಾದ ಮಂಡಿಸಿರುತ್ತಾರೆ ಎಂದರೆ ಸರಿ . ಸದರಿ ರಿಟ್ ನಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಮಾಡಿದ ಆದೇಶದ ಪ್ರಕಾರ ಅರ್ಜಿದಾರರು ಎದುರುದಾರರ ಸಂಸ್ಥೆಗೆ ರೂ. 7,92,002/- ನ್ನು ಪಾವತಿಸಿರುತ್ತಾರೆ ಎಂದರೆ ಸರಿ , ಸಾಕ್ಷಿಯು ಮುಂದುವರೆದು ನಿ ಎ -11 ರಲ್ಲಿ ಯಾವ ಅವಧಿಗೆ ಸದರಿ ಮೊತ್ತವನ್ನು ಕಟ್ಟಲಾಗಿದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ . ಅರ್ಜಿದಾರರು ಎದುರುದಾರರಿಗೆ ವಿವಾದಿತ ಅವಧಿಗೆ Actual Wages ಮೇಲೆ ವಂತಿಗೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ . ಮಾನ್ಯ ಉಚ್ಛ ನ್ಯಾಯಾಲಯದ ಆದೇಶದ ಪ್ರಕಾರ ಅರ್ಜಿದಾರರು ಕಟ್ಟಬೇಕಾಂತಂಹ ವಂತಿಗೆಯನ್ನು ಎದುರುದಾರರ ಸಂಸ್ಥೆಗೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ . Actual Wages ಆಧಾರದ ಮೇರೆಗೆ ಅರ್ಜಿದಾರರು ವಂತಿಗೆಯನ್ನು ಕಟ್ಟಿದ್ದರಿಂದ ಅವರು ಎದುರುದಾರರು ಅಡಾಕ್ ಬೇಸಿಸ್ ಮೇಲೆ ಲೆಕ್ಕ ಹಾಕಿದ ವಂತಿಗೆಯನ್ನು ಕಟ್ಟಲು ಭಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ . ಅರ್ಜಿದಾರರು Actual Wages ಗೆ ಸಂಬಂಧಿಸಿದತಂ ಿ ದಾಖಲಾತಿಗಳನ್ನು ಈ ನ್ಯಾಯಾಧೀಕರಣ ಮುಂದೆ ಹಾಜರು ಪಡಿಸಿದ್ದರಿಂದ ಅವರು ಲೆಕ್ಕ ಹಾಕಿದ ವಂತಿಗೆ ಸರಿಯಾಗಿರುತ್ತದೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ.ರಾವ್ ಪಿ.),<br>
ಅಧ್ಯಕ್ಷಾಧಿಕಾರಿಗಳು/ಜಡ್ಜ್<br>
ಇ.ಎಸ್.ಐ.ನ್ಯಾಯಾಲಯ,<br>
ಮೈಸೂರು.